ಮೂಲ ದಾವಾ ಸಂಖ್ಯೆ. 52/2020 ಪಿ ಡಬ್ಲ್ಯೂ 2

(ದಿನಾಂಕ 08-01-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣಿಕರಿಸಲಾಯಿತು.)

ಪಾಟೀ ಸವಾಲುಃ 10 ನೇ ಪ್ರತಿವಾದಿ ಪರ ಶ್ರೀ ಬಿ ಬಿ ಆರ್ ವಕೀಲರಿಂದಃ-

ನಾನು ನ್ಯಾಯಾಲಯಕ್ಕೆ ಸಾಕ್ಷಿ ನುಡಿಯಲು ಬಂದಿದ್ದೇನೆ. ಈ ದಾವೆಯನ್ನು ವಾದಿಯು ಮೂರ್ತಿನಾಯ್ಕ ಮೇಲೆ ದಾಖಲಿಸಿದ್ದಾನೆ. ದಾವಾ ಜಮೀನುಗಳಲ್ಲಿ ಪಾಲುವಿಭಾಗವಾಗಿಲ್ಲ ಜಮೀನು ಬೇಕು ಅಂತಾ ದಾವೆ ದಾಖಲಿಸಿದ್ದಾನೆ. ನನ್ನ ಸಾಕ್ಷಿ ಪ್ರಮಾಣಪತ್ರದಲ್ಲಿ ಬರೆದಿರುವ ವಿಚಾರ ನನಗೆ ಗೊತ್ತು. ನನ್ನ ಸಾಕ್ಷಿ ಪ್ರಮಾಣಪತ್ರವನ್ನು ವಕೀಲರಿಗೆ ನಾನೇ ಹೇಳಿ ಬರೆಸಿದ್ದೇನೆ.

ನನಗೆ ವಾದಿಯು ಚಿಕ್ಕವಯಸ್ಸಿನಿಂದಲೂ ಪರಿಚಯ ಇರುತ್ತಾರೆ. ವಾದಿ ಪ್ರತಿವಾದಿಯರು ಎಷ್ಟು ವರ್ಷದಿಂದ ಬೇರೆಯಾಗಿದ್ದಾರೆಂದರೆ ಸಾಕ್ಷಿಯು ಅವರು ವಿಭಾಗ ಮಾಡಿಕೊಂಡಿಲ್ಲವೆನ್ನುತ್ತಾರೆ. ಈ ದಾವೆಯ ವಾದಿಯು ನಾನು 20 ವರ್ಷ ವಯಸ್ಸಿನಲ್ಲಿದ್ದಾಗ ನನ್ನ ಸಹೋದರರ ಜೊತೆ ಬೇರೆಯಾಗಿದ್ದೇನೆಂತಾ ನ್ಯಾಯಾಲಯದಲ್ಲಿ ಸಾಕ್ಷಿ ನುಡಿದಿದ್ದು ಈ ವಿಚಾರ ನಿನಗೆ ಗೊತ್ತಾ ಎಂದರೆ ಗೊತ್ತು. 10 ನೇ ಪ್ರತಿವಾದಿಯು ಅವನಿಗೆ ಬಂದ ಜಮೀನಿನಲ್ಲಿ ತೆಂಗಿನ ಗಿಡಗಳನ್ನು ಬೆಳೆಸಿಕೊಂಡು ವ್ಯವಸಾಯ ಮಾಡುತ್ತಾ ಬಂದಿರುತ್ತಾನೆಂದರೆ ಸಾಕ್ಷಿಯು ಅವರವರಿಗೆ ಬಂದ ಜಮೀನುಗಳಲ್ಲಿ ವ್ಯವಸಾಯ ಮಾಡುತ್ತಾ ಬಂದಿರುತ್ತಾರೆನ್ನುತ್ತಾರೆ. 10 ನೇ ಪ್ರತಿವಾದಿಯು ಅವನ ಜಮೀನಿನಲ್ಲಿ ರೇಷ್ಮೆ ಬೆಳೆ ಬೆಳೆದು ಮನೆ ಕಟ್ಟಿಕೊಂಡು ಜೀವನ ಮಾಡುತ್ತಿದ್ದಾರೆಂದರೆ ಸಾಕ್ಷಿಯು ಅವರವರ ಪಾಡಿಗೆ ಅವರು ಜೀವನ ಮಾಡುತ್ತಿದ್ದಾರೆನ್ನುತ್ತಾರೆ.

8 ನೇ ಪ್ರತಿವಾದಿಯು ಎಷ್ಟು ವರ್ಷದ ಹಿಂದೆ ಮದುವೆಯಾಗಿರುತ್ತಾರೆಂದು ನನಗೆ ನಿಖರವಾಗಿ ಗೊತ್ತಿಲ್ಲ ಆದರೆ ಸುಮಾರು 10-15 ವರ್ಷವಾಗಿರಬಹುದು. 8 ನೇ ಪ್ರತಿವಾದಿಗೆ ಅವರ ತಂದೆ ಮತ್ತು ಸಹೋದರರು ಒಳ್ಳೆ ಮನೆತನಕ್ಕೆ ಮದುವೆ ಮಾಡಿಕೊಟ್ಟಿರುತ್ತಾರೆಂದರೆ ಸರಿ. 8 ನೇ ಪ್ರತಿವಾದಿಯ ಹೆಸರು ಪಹಣಿಗಳಲ್ಲಿ ಸೇರಿಸಿದ್ದಾರೋ ಇಲ್ಲವೆನ್ನುವ ವಿಚಾರ ನನಗೆ ಗೊತ್ತಿಲ್ಲ ಆದರೆ ಅವಳ ಮದುವೆಯನ್ನು ಒಳ್ಳೆ ಮನೆತನಕ್ಕೆ ಕೊಟ್ಟು ಮದುವೆ ಮಾಡಿದ್ದಾರೆನ್ನುತ್ತಾರೆ. ವಾದಿ ಮತ್ತು ಪ್ರತಿವಾದಿಯರು ನನಗೆ ಅಳಿಯಂದಿರಾಗಬೇಕು. ನಾನು ವಾದಿಯ ಮೇಲೆ ಬಹಳ ಪ್ರೀತಿ ಇರುವುದರಿಂದ ಅವನಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ,

ಸಿವಿಲ್ ಜಡ್ಜ ಮತ್ತು ಜೆ ಎಂ ಎಫ್ ಸಿ.,
ಹಗರಿಬೊಮ್ಮನಹಳ್ಳಿ